(ಇ) ಈಗಾಗಲೇ ಮೇಲ್ದರ್ಜೆಗೇರಿಸಿದ ಆಸ್ಪತ್ರೆಗಳಿಗೆ ಹೆಚ್ಚುವರಿಯಾಗಿ ಸಿಬ್ಬಂದಿಯನ್ನು ಮಂಜೂರಾತಿ ಮಾಡಲಾಗಿದೆ. ಮೇಲ್ದರ್ಜೆಗೇರಿಸಿರುವ ಆಸ್ಪತ್ರೆಗಳು ಶೇ. 60ರಷ್ಟು ಕಟ್ಟಡ ಪೂರ್ಣಗೊಂಡ ನಂತರ ಸಿಬ್ಬಂದಿಯನ್ನು ಭರ್ತಿ ಮಾಡಲು ಅರ್ಹತೆ ಪಡೆಯುತ್ತದೆ.

(ಈ) ಇಲಾಖೆಯಲ್ಲಿ ಖಾಲಿಯಿರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು 2008ನೇ ಸಾಲಿನಲ್ಲಿ 815 ವೈದ್ಯರ ಹುದ್ದೆಗಳನ್ನು ಲೋಕಸೇವಾ ಆಯೋಗದಿಂದ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಖಾಲಿಇರುವ ವೈದ್ಯರುಗಳನ್ನು ಗುತ್ತಿಗೆ ಆದಾರದ ಮೇಲೆ ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಇಲಾಖೆಯಲ್ಲಿ ಖಾಲಿ ಇರುವ ಅರೆ ವೈದ್ಯಕೀಯ ಸಿಬ್ಬಂದಿಯನ್ನು ಭರ್ತಿ ಮಾಡುವ ಸಲುವಾಗಿ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿ ಪ್ರಸಕ್ತ ಸಾಲಿನಲ್ಲಿ 3228 ಹುದ್ದೆಗಳು ಹಾಗೂ 1000 ಹುದ್ದೆಗಳನ್ನು ಒಟ್ಟು 4228 ಹುದ್ದೆಗಳನ್ನು ತುಂಬಲು ಮತ್ತು ಮುಂದಿನ ವರ್ಷ 1017 ಹುದ್ದೆಗಳನ್ನು ತುಂಬಲು ಅನುಮತಿ ನೀಡಿದೆ. ಈ ಬಗ್ಗೆ ವಿಶೇಷ ನಿಯಮಗಳನ್ನು ರೂಪಿಸಿ ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ

ಊ) ಇಲ್ಲ.

221 ಶ್ರೀ ಮಂಜುನಾಥ್ ಹೆಚ್.ಪಿ (ಹುಣಸೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನ ದಿ: ಶ್ರೀ ಡಿ. ದೇವರಾಜ ಅರಸು ಸಾರ್ವಜನಿಕ ಆಸ್ಪತ್ರೆಗೆ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು;

(ಆ) ಅವುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಮತ್ತು ಯಾವ ದಿನಾಂಕದಿಂದ ಖಾಲಿ ಇರುತ್ತದೆ;

(ಇ) ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಕ್ರಮವೇನು?

ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

(ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನ ದಿ: ಶ್ರೀ ಡಿ. ದೇವರಾಜ ಅರಸು ಸಾರ್ವಜನಿಕ ಆಸ್ಪತ್ರೆಗೆ ಮಂಜೂರಾದ ವೈದ್ಯರ ಹುದ್ದೆಗಳ ಸಂಖ್ಯೆ: 11 ಹಾಗೂ ಇತರೆ ಅರೆ ವೈದ್ಯಕೀಯ ಸಿಬ್ಬಂದಿ 103 ಹುದ್ದೆಗಳು ಮಂಜೂರಾಗಿರುತ್ತದೆ.

(ಆ) 2 ವೈದ್ಯರ ಹುದ್ದೆ ಖಾಲಿ ಇರುತ್ತದೆ. ಹಾಗೂ ಇತರೆ 42 ಸಿಬ್ಬಂದಿ ವರ್ಗದ ಹುದ್ದೆಗಳ ಖಾಲಿ ಇವೆ.

ಖಾಲಿ ಇರುವ ದಿನಾಂಕದ ಪಟ್ಟಿ ಲಗತ್ತಿಸಿದೆ.

ಇ) ಬಂದಿದೆ.

ಈ) ಇಲಾಖೆಯಲ್ಲಿ ಖಾಲಿಯಿರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು 2008ನೇ ಸಾಲಿನಲ್ಲಿ 815 ವೈದ್ಯರ ಹುದ್ದೆಗಳನ್ನು ಲೋಕಸೇವಾ ಆಯೋಗದಿಂದ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಖಾಲಿ ಇರುವ ವೈದ್ಯರುಗಳನ್ನು ಗುತ್ತಿಗೆ ಆದಾರದ ಮೇಲೆ ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಇಲಾಖೆಯಲ್ಲಿ ಖಾಲಿ ಇರುವ ಅರೆ ವೈದ್ಯಕೀಯ ಸಿಬ್ಬಂದಿಯನ್ನು ಭರ್ತಿ ಮಾಡುವ ಸಲುವಾಗಿ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿ ಪ್ರಸಕ್ತ ಸಾಲಿನಲ್ಲಿ 3228 ಹುದ್ದೆಗಳು ಹಾಗೂ 1000 ಹುದ್ದೆಗಳನ್ನು ಒಟ್ಟು 4228 ಹುದ್ದೆಗಳನ್ನು ತುಂಬಲು ಮತ್ತು ಮುಂದಿನ ವರ್ಷ 1017 ಹುದ್ದೆಗಳನ್ನು ತುಂಬಲು ಅನುಮತಿ ನೀಡಿದೆ. ಈ ಬಗ್ಗೆ ವಿಶೇಷ ನಿಯಮಗಳನ್ನು ರೂಪಿಸಿ ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

ಶ್ರೀ ಡಿ. ದೇವರಾಜ ಆರಸ್ ಸಾರ್ವಜನಿಕ ಆಸ್ಪತ್ರೆ, ಹುಣಸೂರು ಮೈಸೂರು ಜಿಲ್ಲೆ

ಇಲ್ಲಿನ ಸಿಬ್ಬಂದಿ ವರ್ಗದ ಮಾಹಿತಿ

1)	ಕಛೇರಿ ಅಧೀಕ್ಷಕರು	1	1	–
2)	ಪ್ರಥಮ ದರ್ಜೆ ಸಹಾಯಕ	3	3	–
3)	ದ್ವಿತೀಯ ದರ್ಜೆ ಸಹಾಯಕ	7	2	5(8 ವರ್ಷದಿಂದ ಖಾಲಿ)
4)	ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ	1	–	1(7:2007 ದಿಂದ ಖಾಲಿ)
5)	ಹಿರಿಯ ಪುರುಷ ಆರೋಗ್ಯ ಸಹಾಯಕ	1	1	–
6)	ಹಿರಿಯ ಮಹಿಳಾ ಆರೋಗ್ಯ ಸಹಾಯಕಿ	1	1	–
7)	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	13	12	1 (1ವರ್ಷದಿಂದ ಖಾಲಿ)
8)	ಕಿರಿಯ ಪುರುಷ ಆರೋಗ್ಯ ಸಹಾಯಕ	4	4	–
9)	ಶೂಶ್ರೂಷಕಿ	20	15	5(1 ವರ್ಷದಿಂದ ಖಾಲಿ)
10)	ಹಿರಿಯ ಔಷಧಿ ವಿತರಕರು	1	–	1(3: 2005 ರಿಂದ ಖಾಲಿ)
11)	ಕಿರಿಯ ಔಷಧಿ ವಿತರಕರು	3	2	2(6ವರ್ಷದಿಂದ ಖಾಲಿ)
12)	ಹಿರಿಯ ಪ್ರಯೋಗ ಶಾಲಾ ತಂತ್ರಜ್ಞರು	1	–	1(3ವರ್ಷದಿಂದ ಖಾಲಿ)
13)	ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು	1	1	–
14)	ಕ್ಷ-ಕಿರಣ ತಂತ್ರಜ್ಞರು	2	2	–
15)	ಶೂಶ್ರೂಷಕ ಅಧೀಕ್ಷಕರು ದರ್ಜೆ-2	1	–	1(5 ವರ್ಷದಿಂದ ಖಾಲಿ)
16)	ನೇತ್ರ ಸಹಾಯಕರು	1	1	–
17)	ಬೆರಳಚ್ಚುಗಾರರು	1	–	1(5 ವರ್ಷದಿಂದ ಖಾಲಿ
18)	ವಾಹನ ಚಾಲಕರು	3	2	1
19)	ಗ್ರೂಪ್-ಡಿ ನೌಕರರು	38	15	23(8ವರ್ಷದಿಂದ ಖಾಲಿ)

ಖಾಲಿ ಹುದ್ದೆಗಳು ಖಾಲಿ ಇರುವುದರಿಂದ ಅಸ್ಥೆಯ ಸಲಲಿಕೆ ನಿರ್ವಹಣೆಗೆ ಅಡಚಣೆಯಾಗಿರುತ್ತದೆ.

ಶ್ರೀ ಡಿ. ದೇವರಾಜ ಅರಸ್ ಸಾರ್ವಜನಿಕ ಆಸ್ಪತ್ರೆ, ಹುಣಸೂರು ಮೈಸೂರು ಜಿಲ್ಲೆ ಇಲ್ಲಿನ ಸಿಬ್ಬಂದಿ ವರ್ಗದ ಮಾಹಿತಿ

ಕ್ರಮ ಸಂಖ್ಯೆ	ಹುದ್ದೆ ಹೆಸರು	ಮಂಜುರಾದ ಹುದ್ದೆ ಸಂ.	ಕರ್ತವ್ಯ ನಿರತ ಹುದ್ದೆ ಸಂ.	ಖಾಲಿ ಹುದ್ದೆ ಸಂಖ್ಯೆ: ಷರಾ
1)	ಮುಖ್ಯ ವೈದ್ಯಧಿಕಾರಿ (ಎದುರು ಹುದ್ದೆಯಲ್ಲಿ)	1	1	0
2)	ಪಿಜಿಶಿಯನ್	1	1	0
3)	ಪ್ರಸೂತಿ ತಜ್ಞರು	1	1	0'
4)	ಜನರಲ್ ಸರ್ಜರಿ	1	1	0
5)	ಅರಿವಳಿಕೆ ತಜ್ಞ	1	1	0
6)	ಮಕ್ಕಳ ತಜ್ಞ	1	1	0
7)	ಮೂಳೆ ತಜ್ಞ	1	1	0
8)	ಚರ್ಮರೋಗ ತಜ್ಞ	1	0	1
9)	ರೇಡಿಯಾಲಜಿಸ್ಟ್ (ಎದುರು ಹುದ್ದೆಯಲ್ಲಿ)	1	1	0
10)	ಇಎನ್‌ಟಿ ತಜ್ಞ	1	0	1
	ಒಟ್ಟು	10	8	2
11)	ದಂತ ವೈದ್ಯಾಧಿಕಾರಿ	1	1	0
12)	ಸಹಾಯಕ ಆಡಳಿತಾಧಿಕಾರಿ	1	1	0
13)	ನರ್ಸಿಂಗ್ ಸುಪರಿಂಟೆಂಡೆಂಟ್ ಗ್ರೇಡ್	1	0	1

171 ಶ್ರೀ ನರೇಂದ್ರಬಾಬು. ಎನ್.ಎಲ್.(ಮಹಾಲಕ್ಷ್ಮಿ ಲೇಔಟ್) :– ಮಾನ್ಯ ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ಚಿಕುಂಗುನ್ಯ, ಡೆಂಗ್ಯೂ ಜ್ವರ/ಹಾವಳಿ ಎಲ್ಲೆಲ್ಲಿ ಸಂಭವಿಸಿದೆ (ವಿವರ ನೀಡುವುದು)

(ಆ) ಈ ಖಾಯಿಲೆಯಿಂದ ಈವರೆವಿಗೆ ಮೃತಪಟ್ಟವರ ಸಂಖ್ಯೆ ಎಷ್ಟು? (ವಿವರ ನೀಡುವುದು)

(ಇ) ಈ ಖಾಯಿಲೆಯನ್ನು ನಿರ್ಮೂಲನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?